**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 2209/2025 ಸಿ.ಡಬ್ಲೂ.1 ಪಿ.ಡಬ್ಲೂ.5

| | |
|---|---|
| ಹೆಸರು | ಸವಿತಾ |
| ತಂದೆ/ಗಂಡ | ಮಲ್ಲಿಕಾರ್ಜುನ |
| ವಯಸ್ಸು | 30 ವರ್ಷ |
| ಉದ್ಯೋಗ | ಪಿ.ಎಸ್.ಐ |
| ವಾಸಸ್ಥಳ | ಮಾದನ ಹಿಪ್ಪರಗಾ |

ದಿನಾಂಕ 17-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಅಗಷ್ಟ 2024 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 22-02-2025 ರಂದು ನಾನು ಠಾಣೆಯಲ್ಲಿ ಇದ್ದಾಗ 8.30 ಸುಮಾರಿಗೆ ಹಿರೋಳ್ಳಿ ಗ್ರಾಮದಲ್ಲಿ ಶ್ರೇಯಸ್ಸ ಪಾನ ಶಾಪ ಹತ್ತಿರ ಸಾವರ್ಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತ ಬಾತ್ಮಿ ಬಂದಿದ್ದು, ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ಪರವಾನಿಗೆ ಪಡೆದುಕೊಂಡು ನಮ್ಮ ಸಿಬ್ಬಂದಿಯವರಾದ ಚಾಸಾ 4 ರಿಂದ 6 ರವರ ಮೂಲಕ ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಮಾಹಿತಿ ತಿಳಿಸ ಅವರ ಒಪ್ಪಿ ಕೊಂಡ ಮೇರೆಗೆ ಸರ್ಕಾರಿ ವಾಹನ ನಂಬರ ಕೆ ಎ 32/ಜಿ -1028 ರಲ್ಲಿ ನಮ್ಮ ಸಿಬ್ಬಂದಿ ಜೊತೆಗೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಶ್ರೇಯಸ್ಸ ಪಾನ ಶಾಪದಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪರಿಶೀಲನೆ ಮಾಡಿ ಬಾತ್ಮಿಯನ್ನು ಖಚಿತ ಪಡಿಸಿಕೊಂಡು ಸುಮಾರು 10.30 ಗಂಟೆಗೆ ದಾಳಿ ಮಾಡಲಾಗಿ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಗುರುಬಸಪ್ಪಾ ತಂದೆ ಸೋಮನಾಥ ಉಡಗಿ ಅಂತಾ ತಿಳಿಸಿದ್ದು, ಅವರ ನ್ಯಾಯಾಲಯದಲ್ಲಿ ಇರುವ ಆರೋಪಿ ಅಂತಾ ಗುರುತಿಸುತ್ತಾರೆ. ಸದರಿ ವ್ಯಕ್ತಿಗೆ ಪರವಾನಿಗೆ ಬಗ್ಗೆ ವಿಚಾರಿಸಲಾಗಿ ನನ್ನ ಬಳಿ ಪರವಾನಿಗೆ ಇಲ್ಲ ಅಂತಾ ತಿಳಿಸಿರುತ್ತಾರೆ. ನಂತರ ಸದರಿ ವ್ಯಕ್ತಿಯ ಬಳಿ ಒಂದು ರಟ್ಟಿನ ಡಬ್ಬಿಯಲ್ಲಿ ಇದ್ದ Orginal Choice 90 ML ನ ಡಿಲಕ್ಸ ವಿಸ್ಕಿಯ 75 ಪೌಚಗಳನ್ನು ಜಪ್ತಿ ಪಡಿಸಿಕೊಂಡು ಅಂಗಶೋಧನೆ ಮಾಡಿದಾಗ ರೂ. 450/- ಹಣ ದೊರೆತಿರುತ್ತದೆ. ಸದರಿ ಮು.ಮಾಲನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು 10.30 ಗಂಟೆಯಿಂದ 11.30 ಗಂಟೆಯವರೆಗೆ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತೇವೆ. ನಂತರ ಮುಂದಿನ ಕ್ರಮಕ್ಕಾಗಿ ಆರೋಪಿ, ಮು. ಮಾಲು, ಜಪ್ತಿ ಪಂಚನಾಮೆ ಮತ್ತು ವರದಿಯೊಂದಿಗೆ ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ನಿಪಿ. 4 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4(ಬಿ) ಅಂತಾ ಗುರುತಿಸಲಾಯಿತು. . ಸಾಕ್ಷಿಯು ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1(ಸಿ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ. 2 ರಲ್ಲಿ ತಾವು ಇರುವುದಾಗಿ ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ. 1 ಮತ್ತು 2 ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಎಸ್ ಸಿ ವಕೀಲರಿಂದ: ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಆಲಿಸಿ ನೀಡಲಾಯತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ